ಚಿತ್ರ: ದೇವರ ದುಡ್ಡು (1977)
ಹಿನ್ನಲೆ ಹಾಯಕ: ಎಸ್. ಪಿ. ಬಾಲಸುಬ್ರಹ್ಮಣ್ಯಂ
ಸಂಗೀತ: ರಾಜನ್–ನಾಗೇಂದ್ರ

ತರೀಕೆರೆ ಏರಿ ಮೇಲೆ ಮೂರು ಕರಿ ಕುರಿಮರಿ ಮೇಯ್ತಿತ್ತು
ಹಾಯಾಗೀ ಮೇಯ್ತಿತ್ತು.. ..
ಕಬ್ಬಿನಗದ್ದೆ ಮಧ್ಯದಲ್ಲಿ ಉಬ್ಬಿದ್ ಕೊಬ್ಬಿದ್ ಗಬ್ಬದ್ ತೋಳ
ಕುರಿ ನೋಡಿ ಹಬ್ಬ ಎಂದು ಕಾಯ್ತಿತ್ತು.. ..
ತಿನ್ನೋಕ್ ಕಾಯ್ತಿಯ್ತು..
ಬಾಯಲ್ ನೀರು ಚಪ್ಪರಿಸ್ಕೊಂಡು ಬರ್ತಿತ್ತು.. ತೋಳ ಬರ್ತಿತ್ತು ॥
ಬಾಲ ಗೀಲ ಸೆಟಸ್ಕೊಂಡು
ಹಾರೋ ಹೊತ್ಗೆ.. ಹಾಳು ಸೀನು ಬಂದ್ಹೋಯ್ತು
ಕಾಲು ಜಾರಿ ತೋಳ ಕೆಳಗೆ ಬಿದ್ಹೋಯ್ತು..
ಕೆರೆಗೆ ಬಿದ್ಹೋಯ್ತು ॥

ಮೋಡದ ಮಧ್ಯೆ ಗುಡುಗೋ ಹಾಗೆ
ಭೂಮಿಯೆಲ್ಲಾ ನಡುಗೋ ಹಾಗೆ
ಜೋರಾಗಿ ಘರ್ಜನೆ ಮಾಡ್ತ ಸಿಂಗ ಬರ್ತಿತ್ತ
.. .. ಹಸಿಕೊಂಡು ಬರ್ತಿತ್ತ
(.. .. ಹಸ್ಕೊಂಡು ಬರ್ತಿತ್ತು)

ನೀರಿಂದ ಈಜ್ಕೊಂಡು ಬರೋ ತೋಳಾನ ತಿನ್ನೋಕಂತ
ಬಿಟ್ಕೊಂಡು ಬಾಯನ್ನ ನುಗ್ಗಿತ್ತು
ಸಿಂಹ ತೋಳ.. ತೋಳ ಸಿಂಹ ಹೂ..
ಹೆದರ್ಕೊಂಡ್ ತೋಳ.. ಮುದರ್ಕೊಂಡ್ ಬಾಲ
ತಪ್ಪಿಸ್ಕೊಂಡ್ ಓಡುತ್ತಾ
ಜೇಡ ಹಾಕಿದ ಬಲೇಗೆ ಸಿಂಹ ಸ್ಕಿಬ್ತು
ತೋಳ ಓಡ್‌ಹೋಯ್ತು. ಸಿಂಹ ಸಿಕ್ಬಿತ್ತು
ಇಷ್ಟೆಲ್ಲಾ ಆದ್ರೂ.. ತರೀಕೆರೆ ಏರಿ ಮೇಲೆ... ।